ಒಎಸ್ 542-16
ಪಿಡಬ್ಲ್ಯೂ-1 ಚಂದ್ರಶೇಖರ ಗೌಡ ಎಮ್

ದಿನಾಂಕ 14.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಪಿ ಜೆ ಆರ್ ವಕೀಲರಿಂದ

1. ನಾನು 26 ವರ್ಷಗಳಿಂದ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ . ವಾದ ಪತ್ರದಲ್ಲಿ ದಾವ ಎ ಆಸ್ತಿಯ ದಿಕ್ಕುಗಳನ್ನು ತೋರಿಸಿಲ್ಲ ಎಂದರೆ ಸರಿ . ವಾದ ಪತ್ರದಲ್ಲಿ ಬಿ ಶೆಡ್ಯೂಲ್ ಆಸ್ತಿಯು ಎ ಶೆಡ್ಯೂಲ್ ಆಸ್ತಿಯ ಅಂಶವಾಗಿದ್ದು ಅದರ ದಿಕ್ಕುಗಳನ್ನು ತೋರಿಸಿಲ್ಲ ಎಂದರೆ ಸರಿ . ದಾ ಎ ಶೆಡ್ಯೂಲ್ ಆಸ್ತಿಯ ಪೂರ್ವದಲ್ಲಿ ದಕ್ಷಿಣ ಉತ್ತರಕ್ಕೆ ರಸ್ತೆ ಇರುತ್ತದೆ ಎಂದರೆ ಸಾಕ್ಷಿಯು ನಾವು ಸ್ವಾಧೀನದಲ್ಲಿ ಇರುವ ಜಾಗದಲ್ಲಿ ಹಾದು ಹೋಗುತ್ತದೆ . ರಸ್ತೆಯ ಪೂರ್ವಕ್ಕೆ ಪ್ರತಿವಾದಿಗೆ ಸೇರಿದ ಭೂಮಿ ಇದೆ ಎಂದರೆ ಸರಿ . ನಮ್ಮ ಭೂಮಿಯಾಗಿ ರಸ್ತೆ , ರಸ್ತೆಯ ಮತ್ತೊಂದು ದಿಕ್ಕಿಗೆ ಬೇಲಿ ಇದೆ ಎಂದರೆ ಸಾಕ್ಷಿ ಯು ಬಿ ಶೆಡ್ಯೂಲ್ ಆಸ್ತಿಯ ಬೇಲಿ ಇದೆ ಎನ್ನುತ್ತಾರೆ . ರಸ್ತೆಯ ಬಗ್ಗೆ ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ .

2. ನಿಪಿ-1 ರ ಪ್ರಕಾರ ನನಗೆ ದಾವ ಆಸ್ತಿಯು ಬಂದಿದೆ . ಸರ್ವೆ ನಂಬ್ರ 93/5 ರಲ್ಲಿ 80 ಸೆಂಟ್ಸ್ ಪ್ರತಿವಾದಿಗೆ ಸೇರಿದ ಜಾಗ ಎಂದರೆ ಸರಿ . ಈ ಭೂಮಿ ನಮ್ಮ ಭೂಮಿಯ ಪೂರ್ವ ದಿಕ್ಕಿಗೆ ಇದೆ . ಪ್ರತಿವಾದಿಗೆ ಸೇರಿದ ಭೂಮಿಯಲ್ಲಿ ಕಾಡು ಮರಗಳು ಇದೆ . ಎ ಶೆಡ್ಯೂಲ್ ಆಸ್ತಿಯಲ್ಲಿ ತೋಟ ಇದೆ . ಬಿ ಶೆಡ್ಯೂಲ್ ನಲ್ಲಿ ಕಾಡು ಇದೆ . ಪ್ರತಿವಾದಿಗೆ ಸೇರಿದ 80 ಸೆಂಟ್ಸ್ ಜಮೀನಿನಲ್ಲಿ ದಾವ ಬಿ ಶೆಡ್ಯೂಲ್ ನಲ್ಲಿ ಒಂದೇ ತರಹದ ಕಾಡು ಇದೆ ಎಂದರೆ ಸರಿ . ನಿಪಿ-1 ಕ್ಕಿಂತ ಮೊದಲು ದಾವ ಆಸ್ತಿಗಳು ಭೂ ನ್ಯಾಯ ಮಂಡಳಿಗೆ ತೀರ್ಪಿನಿಂದ ತಂದೆಗೆ ಬಂದಿದ್ದವು ಎಂದರೆ ಸರಿ . ಅದಕ್ಕೆ ಸಂಬಂಧಿಸಿದ ನಕಾಶೆ ನನ್ನ ಬಳಿ ಇದೆ . ಆ ನಂತರ ನಮ್ಮ ನಡುವೆ ಪಾಲು ಆಗಿದೆ . ಪಾಲು ಪಟ್ಟಿ ಆಗುವಾಗ ನಕಾಶೆ ಆಗಿದೆ , ಅದು ಸಹ ನನ್ನ ಅಲ್ಲಿ ಇದೆ . ಭೂ ನ್ಯಾಯ ಮಂಡಳಿಯ ನಕಾಶೆ ಮತ್ತು ಪಾಲು ಪಟ್ಟಿಯ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದಾ

ಎಂದರೆ ನಮ್ಮ ವಕೀಲರಲ್ಲಿ ಕೊಟ್ಟಿದ್ದೇನೆ . ನಾನು ಅದನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ಬಿ ಶೆಡ್ಯೂಲ್ ಆಸ್ತಿಯಲ್ಲಿ ಪ್ರತಿವಾದಿಯು 17 ಸೆಂಟ್ಸ್ ಅತಿಕ್ರಮಣ ಮಾಡಿದ್ದಾರೆ ಎಂದು ವಾದ ಪತ್ರದಲ್ಲಿ ಹೇಳಿದ್ದು ಅದು ನಿಖರವಾಗಿ ಹೇಳಲು ಬರುವುದಿಲ್ಲ ಅದು ಅಂದಾಜು . ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಬರಲಿಕ್ಕೆ ಸಾಕು . ನಮ್ಮ ಅಡಿಕೆ ತೋಟ ರಸ್ತೆಯ ಒಂದು ಕಡೆ ಇದೆ ಇನ್ನೊಂದು ಕಡೆ ಇಲ್ಲ . ನಮ್ಮ ಅಡಿಕೆ ತೋಟಕ್ಕೆ ಆರು ವರ್ಷ ಪ್ರಾಯ ಆಗಿದೆ . ದಾವ ಎ ಆಸ್ತಿಯನ್ನು ಪ್ರತಿವಾದಿಯರಿಗೆ ನೋಟಿಸ್ ಕೊಟ್ಟು ಅಳತೆ ಮಾಡಲಾಗಿದೆಯೇ ಎಂದರೆ ಸಾಕ್ಷಿಯು ಅಳತೆ ಮಾಡಲಿಕ್ಕೆ ಪ್ರತಿವಾದಿಗೆ ನೋಟಿಸ್ ಕೊಟ್ಟಿದ್ದೇವೆ ಆದರೆ ಅವರು ಬರಲಿಲ್ಲ ಮತ್ತು ಬಿಡಲಿಲ್ಲ . 2017 ಅಥವಾ 2018 ರಲ್ಲಿ ನೋಟಿಸ್ ಕೊಟ್ಟಿದ್ದೇವೆ . ಪ್ರತಿವಾದಿಯು ಅಳತೆ ಮಾಡುವ ಸಮಯದಲ್ಲಿ ಆಕ್ಷೇಪಣೆ ಮಾಡಿದ್ದು ಆ ಕಾರಣಕ್ಕೆ ಅಳತೆ ಆಗಿರುವುದಿಲ್ಲ . ಪ್ರತಿವಾದಿಯು ನಮ್ಮ 80 ಸೆಂಟ್ಸ್ ಗೆ ನೀವು ಬರುತ್ತಿದ್ದಿರಿ ಎಂದು ಆಕ್ಷೇಪಣೆ ಮಾಡಿರುತ್ತಾರೆ . ಎ ಶೆಡ್ಯೂಲ್ ಆಸ್ತಿಯ ಬಗ್ಗೆ ಅವರ ಆಕ್ಷೇಪಣೆ ಇಲ್ಲ . ಪ್ರತಿವಾದಿಗೆ ನೋಟಿಸ್ ಕೊಟ್ಟ ಬಗ್ಗೆ ದಾಖಲೆ ಇದೆಯಾ ಎಂದರೆ ನನ್ನ ಬಳಿ ಇಲ್ಲ . ಸಾಕ್ಷಿ ಮುಂದುವರಿದು ನನ್ನ ಚಿಕ್ಕಪ್ಪನ ಬಳಿ ಇರಬಹುದು . ಅಳತೆ ಮಾಡಲು ನನ್ನ ಚಿಕ್ಕಪ್ಪ ಗಂಗಯ್ಯ ಗೌಡ ಇವರು ಅರ್ಜಿ ಕೊಟ್ಟಿದ್ದರು . ನಾನು ಅರ್ಜಿ ಕೊಟ್ಟಿಲ್ಲ . ಗಂಗಯ್ಯ ಗೌಡರಿಗೆ ಸೇರಿದ ಸರ್ವೆ ನಂಬ್ರ 93/27 . ಆ ಭೂಮಿಯನ್ನು ಅಳತೆ ಮಾಡಲು ನೋಟಿಸ್ ಕೊಟ್ಟಿದ್ದು . ಆ ಭೂಮಿಯನ್ನು ಅಳತೆ ಮಾಡುವಾಗ ಪ್ರತಿವಾದಿಗೆ ನೋಟಿಸ್ ಕೊಟ್ಟಿದ್ದು ಏಕೆಂದರೆ ಪ್ರತಿವಾದಿಯ ಸರ್ವೆ ನಂಬ್ರ ಕೂಡ ಅದೇ ಸರ್ವೆ ನಂಬ್ರನಲ್ಲಿ ಬರುತ್ತಿತ್ತು . ನನ್ನ ಪ್ರಕಾರ ಗಂಗಯ್ಯ ಗೌಡ ಮತ್ತು ಪ್ರತಿವಾದಿ ಯ ನಡುವೆ ಕೂಡ ಗಡಿ ವಿಚಾರದ ಬಗ್ಗೆ ತಕರಾರು ಇದೆ ಎಂದರೆ ಸರಿ . ಗಡಿ ವಿಚಾರದ ತಕರಾರುಗಳು ಇಲ್ಲಿಯವರೆಗೂ ಸರ್ವೆ ಇಲಾಖೆಯಲ್ಲಿ ಬಗೆಹರಿದಿಲ್ಲ ಎಂದರೆ ಸರಿ . ಬಿ ಶೆಡ್ಯೂಲ್ ಆಸ್ತಿಯ ಪ್ರತ್ಯೇಕ ನಕಾಶೆ ತಯಾರಿಸಿಲ್ಲ

. ವಾದ ಪತ್ರದಲ್ಲಿ ಖಾಸಗಿ ಸರ್ವೆಯರ್ ಅಂತ ಹೇಳಿದ್ದು ಅದು ದಿನಕರ ಎನ್ನುವವರು . ಅವರು ನನಗೆ ನಕಾಶೆಯನ್ನು ಮಾಡಿಕೊಟ್ಟಿಲ್ಲ . ನಾನು ಪ್ರತಿವಾದಿಗೆ ಸೇರಿದ 80 ಸೆಂಟ್ಸ್ ಜಮೀನಿನ ನಕಾಶೆಯನ್ನು ನೋಡಿಲ್ಲ . ನನ್ನ ಪ್ರಕಾರ ದಾವ ಎ ಶೆಡ್ಯೂಲ್ ಆಸ್ತಿಯ ಸರ್ವೆ ನಂಬ್ರ 93/18 . ನನ್ನ ವಕೀಲರಿಗೆ ಅನುಭವ ಕೊಡುವಾಗ ನಾನು ಹೇಳಿದ ಸರ್ವೆ ನಂಬ್ರನ ನಕಾಶೆಯನ್ನು ಕೊಟ್ಟಿದ್ದೇನೆ . ಸರ್ವೆ ನಂಬ್ರ 93/18 ರ ಒಟ್ಟು ವಿಸ್ತೀರ್ಣ ಸುಮಾರು 5 ಎಕರೆ ಇರಬಹುದು . 2016 ರಲ್ಲಿ ಎ ಶೆಡ್ಯೂಲ್ ಪ್ಲಾಟಿಂಗ್ ಆಗಿದೆ . ಪ್ಲಾಟಿಂಗ್ ಮಾಡುವಾಗ ಸರ್ವೆ ನಂಬ್ರನ ನಾಲ್ಕು ಸುತ್ತಿನ ಬಾಜುದಾರರಿಗೆ ನೋಟಿಸ್ ಕೊಟ್ಟು ಸರ್ವೆ ಮಾಡಬೇಕಾಗುತ್ತದೆ ಎಂದರೆ ಸರಿ . ಪ್ಲಾಟಿಂಗ್ ಮಾಡುವಾಗ ಪ್ರತಿವಾದಿಯವರಿಗೆ ನೋಟಿಸ್ ಕೊಟ್ಟಿಲ್ಲ . ನಿಪಿ-1 ರಲ್ಲಿರುವ ನಕಾಶೆಯನ್ನು ಏಕಪಕ್ಷೀಯವಾಗಿ ಮತ್ತು ಕನೂನುಬಾಹಿರವಾಗಿ ವಸ್ತುಸ್ಥಿತಿಗೆ ವಿರುದ್ಧವಾಗಿ ತಯಾರಿಸಿಕೊಂಡಿದ್ದು ಎಂದರೆ ಸರಿಯಲ್ಲ . ನಿಪಿ-1 ಆಗುವುದಕ್ಕಿಂತ ಮೊದಲು ಹಕ್ಕು ರೀಲಿಸ್ ಮಾಡಿದವರು ಮತ್ತು ಪ್ರತಿವಾದಿಯ ನಡುವೆ ತಕರಾರು ಇರಲಿಲ್ಲ . ಅಲ್ಲಿಯ ಒಟ್ಟು ಭೂ ಸ್ಥಿತಿ ಹಕ್ಕು ರಿಲೀಸ್ ಮಾಡುವ ಮೊದಲು ಮತ್ತು ಈಗ ಒಂದೇ ರೀತಿ ಎಂದರೆ ಸರಿ . ನಿಪಿ-1 ರ ನಾಲ್ಕನೇ ಪೇಜಿನಲ್ಲಿ ಭೂ ನ್ಯಾಯ ಮಂಡಳಿಯ ಆದೇಶದ ಪ್ರಕಾರ ಬಂದ ಆಸ್ತಿಯ ಅಳತೆಯ ಸಂದರ್ಭದಲ್ಲಿ ತಿದ್ದುಪಡಿ, ದುರಸ್ತಿ ಆಗಿದೆ ಎಂಬ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಯಾವುದೇ ತಿದ್ದುಪಡಿ ಮಾಡಿಲ್ಲ ಎನ್ನುತ್ತಾರೆ . ನಿಪಿ-1 ನ್ನು ಬರೆಯಲು ರವಿಶಂಕರ್ ವಕೀಲರು ಅನುಭವ ನೀಡಿರುತ್ತಾರೆ .

3. ನಾವು ಪ್ರತಿವಾದಿಯರಿಗೆ ನೋಟಿಸ್ ಕೊಟ್ಟಿದ್ದು ನಂತರ ಪ್ರತಿವಾದಿಯು ಅದಕ್ಕೆ ಪ್ರತ್ಯುತ್ತರ ನೋಟಿಸನ್ನು ನೀಡಿದ್ದು ನಂತರ ನಾನು ಅವರನ್ನು ಕರೆದು ವಿಚಾರ ಮಾಡಿಲ್ಲ . ಅವರನ್ನು ಕರೆದು ವಿಚಾರ ಮಾಡಿ ಅಳತೆ ಮಾಡಿಸಿದರೆ ಸತ್ಯ ವಿಚಾರ ಗೊತ್ತಾಗುತ್ತದೆ ಎಂದು ತಿಳಿದು ಅಳತೆ ಮಾಡಿಸಿಲ್ಲ ಎಂದರೆ ಸರಿ .

ಒಎಸ್ 542-16

ಪಿಡಬ್ಲ್ಯೂ-1 ಚಂದ್ರಶೇಖರ ಗೌಡ ಎಮ್

ಪ್ರತಿವಾದಿ ಅತಿಕ್ರಮಣ ಮಾಡಿದ ಬಗ್ಗೆ ಪೋಲಿಸರಿಗೆ ದೂರನ್ನು ನೀಡಿದ್ದೇವೆ . ಪ್ರತಿವಾದಿಯು ನಾನು ಹೇಳಿದಂತೆ ಅತಿಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿಯ ಜಮೀನನ್ನು ಕಬಳಿಸುವ ಉದ್ದೇಶದಿಂದ ಅಂದಾಜಿನ ರೀತಿಯಲ್ಲಿ ಸುಳ್ಳು ದಾವೆಯನ್ನು ಪ್ರತಿವಾದಿಯ ಮೇಲೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ನಿಪಿ-1 ತಯಾರಿಸುವ ಸಮಯದಲ್ಲಿ ಸದರಿ ಜಮೀನಿನ ಮೌಲ್ಯವೂ ರೂ ಮೂರು ಲಕ್ಷ ಆಗಿತ್ತು . ಬಿ ಶೆಡ್ಯೂಲ್ ಆಸ್ತಿಯ ಅಂದಾಜು ಮೌಲ್ಯ ರೂ. ಐವತ್ತು ಸಾವಿರ . ಪ್ರತಿವಾದಿ ಸಲ್ಲಿಸಿದ ಲಿಖಿತ ಹೇಳಿಕೆಯನ್ನು ನಾನು ನೋಡಿಲ್ಲ . ಬಿ ಶೆಡ್ಯೂಲ್ ಆಸ್ತಿಯ ನಾನು ಹೇಳಿದಂತೆ ಇಲ್ಲ ಅದರ ಮೌಲ್ಯ ಜಾಸ್ತಿ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು .

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಬಂಟ್ವಾಳ, ದ.ಕ.